

ಗೋಬಿ ಮಂಚೂರಿ ಹಾಗೂ ಬಾಂಬೆ ಮಿಠಾಯಿಗೆ ಬಳಸುವ ಹಾನಿಕಾರಕ ಕೃತಕ ಬಣ್ಣಗಳಿಗೆ ಸರ್ಕಾರ ಕೆಂಪುನಿಶಾನೆ ತೋರಿದೆ. ಈ ನಿಷೇಧ, ತಿನಿಸುಗಳಲ್ಲಿ ಬಳಸುವ ಹಾನಿಕಾರಕ ಬಣ್ಣಗಳ ಕುರಿತ ನಮ್ಮ ಗಮನಸೆಳೆಯಬೇಕಾಗಿದೆ. ಅರಿತೋ ಅರಿಯದೆಯೋ ನಮ್ಮ ಆಹಾರವನ್ನು ನಾವೇ ಕಲುಷಿತಗೊಳಿಸುತ್ತಿದ್ದೇವೆ. ಬಾಯಿರುಚಿಗೆ ಮಾರುಹೋಗಿ, ರುಚಿಕಾರಕಗಳ ಹೆಸರಿನಲ್ಲಿ ಪೇಟೆಯಲ್ಲಿ ಸಿಗುವ ಪುಡಿ–ಪೇಸ್ಟುಗಳನ್ನು ಬಳಸುತ್ತಿದ್ದೇವೆ; ಈ ಮೂಲಕ ನಮ್ಮ ಆರೋಗ್ಯವನ್ನು ನಾವೇ ಅಪಾಯಕ್ಕೆ ಒಡ್ಡುತ್ತಿದ್ದೇವೆ. ಅಡುಗೆಮನೆಯಲ್ಲಿ ನೈಸರ್ಗಿಕ ಪದಾರ್ಥಗಳಿಂದಲೇ ರುಚಿ–ಬಣ್ಣದ ಉತ್ಪನ್ನಗಳನ್ನು ಮಾಡಿಕೊಳ್ಳುವುದರ ಬದಲು, ಪೇಟೆಯಲ್ಲಿನ ರಾಸಾಯನಿಕಗಳಿಗೆ ದುಡ್ಡು ಸುರಿಯುತ್ತಿದ್ದೇವೆ, ಆರೋಗ್ಯವನ್ನೂ ಬಲಿಕೊಡುತ್ತಿದ್ದೇವೆ. ರುಚಿಗೆ ತೆರುತ್ತಿರುವ 'ಬೆಲೆ'ಯ ಬಗ್ಗೆ ಯೋಚಿಸಲಿದು ಸಕಾಲ. ಇದು 'ಸುಧಾ' ಕಾಳಜಿಯಿಂದ ಪ್ರಸ್ತುತಪಡಿಸುತ್ತಿರುವ ಬರಹ.

■ ಸುಮಲತಾ ಎನ್.